**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಅಫಜಲಪೂರ.**

**ಸಿ.ಸಿ.ನಂ.156/2020**

ಸರಕಾರದ ಪರವಾಗಿಃ ಅಫಜಲಪೂರ ಪೊಲೀಸ್ ಠಾಣೆ

-:ವಿರುದ್ದ:-

ಆರೋಪಿ/ತರುಃ ವಿಠಲ್ ತಂದೆ ಷಣ್ಮುಖಪ್ಪ ಸುರಗಳ್ಳಿ,
50 ವರ್ಷ, ಉಃಟ್ರ್ಯಾಕ್ಟರ ಚಾಲಕ ಮತ್ತು ಮಾಲೀಕ,
ವಾಸಃ ಶೀವೂರ ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿತನ ಹೇಳಿಕೆಗಳು**

ಪ್ರಃ1: ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದಿರಾ ?

ಉಃ

ಪ್ರಃ 2 ಪ್ರಾಸಾ-01 ನೀಲಪ್ಪ ತಂದೆ ಶೆಟ್ಟಪ್ಪ ಜಮಾದಾರ, ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-1 ಮತ್ತು 4 ರವರ ಪರಿಚಯ ಇರುತ್ತದೆ. ತಾನು ಶಿವೂರ ಗ್ರಾಮದಲ್ಲಿ ಗ್ರಾಮ ಸಹಾಯಕ ಕೆಲಸ ನಿರ್ವಹಿಸುತ್ತಿದ್ದಾಗ ತಮ್ಮ ಗ್ರಾಮ ಲೆಕ್ಕಾಧಿಕಾರಿಗಳ ಆದೇಶದ ಮೇರೆಗೆ ದಿನಾಂಕಃ 05.12.2019 ರಂದು ರಾತ್ರಿ 11-30 ಗಂಟೆಗೆ ಶಿವೂರ ಕ್ರಾಸ ಹತ್ತಿರ ಮರಳು ಸಾಗಾಣಿಕೆ ನಡೆಯುತ್ತಿದ್ದು, ಅದಕ್ಕೆ ತನಗೆ ಬರುವಂತೆ ಆದೇಶಿಸಿರುತ್ತಾರೆಂದು ಹಾಗೂ ತಾನು, ಚಾಸಾ-1, 3 ರವರು ಸೇರಿಕೊಂಡು ಶಿವೂರ ಕ್ರಾಸ ಹತ್ತಿರ ಹೋಗಿರುತ್ತೇವೆಂದು ಹಾಗೂ ಆ ನಂತರ ಅಲ್ಲಿ ಬರುತ್ತಿದ್ದ ಮರಳು ತುಂಬಿದ ಒಂದು ಟ್ರ್ಯಾಕ್ಟರನ್ನು ನಿಲ್ಲಿಸಿ ವಿಚಾರಿಸಿ, ಮಾಶಾಳದ ಪೋಲಿಸ ಹೊರವಲಯದ ಕಚೇರಿಗೆ ಟ್ರ್ಯಾಕ್ಟರನ್ನು ತೆಗೆದುಕೊಂಡು ಹೋಗಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 3 ಪ್ರಾಸಾ-02 ಮಹ್ಮದ ತಂದೆ ಖಾರದಸಾಬ ಮುಲ್ಲಾ ಗ್ರಾಮ ಲೆಕ್ಕಿಗ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 04.12.2019 ರಂದು ಮಾನ್ಯ ತಹಸೀಲ್ದಾರ ರವರ ಮೌಖಿಕ ಆದೇಶದ ಮೇರೆಗೆ ತಾನು ಹಾಗೂ ಚಾಸಾ-1 ರವರು ಕೂಡಿಕೊಂಡು ಶಿವೂರ ಕ್ರಾಸ ಹತ್ತಿರ ಗಸ್ತು ಕರ್ತವ್ಯಕ್ಕೆ ಹೋಗಿದ್ದು ಆ ನಂತರ ಚಾಸಾ-2 ರವರು ಘಟನಾ ಸ್ಥಳಕ್ಕೆ ಬರಲು ತಿಳಿಸಿದ್ದು, ಅದೇ ದಿನ ರಾತ್ರಿ 10-30 ರಿಂದ 11-00 ಗಂಟೆ ಕಾಲ ಗಸ್ತು ಕರ್ತವ್ಯದಲ್ಲಿದ್ದಾಗ ಶಿವೂರ ಗ್ರಾಮದಿಂದ ಒಂದು ಟ್ರ್ಯಾಕ್ಟರ ಮರಳು ತುಂಬಿಕೊಂಡು ಬರುವುದನ್ನು ನೋಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ: 4 ಪ್ರಾಸಾ-02 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆ ನಂತರ ತಾನು ಹಾಗೂ ಚಾಸಾ-1 ರವರು ಸೇರಿ ಟ್ರ್ಯಾಕ್ಟರ ಚಾಲಕನಿಗೆ ಟ್ರ್ಯಾಕ್ಟರ ನಿಲ್ಲಿಸಲು ಸೂಚಿಸಿದ್ದು, ಆಗ ಚಾಲಕ ಸದರಿ ಆರೋಪಿತನು ಟ್ರ್ಯಾಕ್ಟರ ನಿಲ್ಲಿಸಿ ಇಳಿದು ಓಡಿ ಹೋಗಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉ:

ಪ್ರ: 5 ಪ್ರಾಸಾ-02 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆ ನಂತರ ತಾನು, ಚಾಸಾ-1 ಮತ್ತು ಚಾಸಾ-2 ರವರು ಸೇರಿಕೊಂಡು ರಾತ್ರಿ 11-30 ರಿಂದ 12-30 ರ ವರೆಗೆ ಪಂಚನಾಮೆಯನ್ನು ಜರುಗಿಸಿ ಸದರಿ ಪಂಚನಾಮೆಯನ್ನು ಶಿವೂರ ಮತ್ತು ಕರಜಗಿ ಕ್ರಾಸ ಬಳಿ ಮಾಡಿದ್ದು, ಪಂಚನಾಮೆ ಮಾಡುವ ಸಮಯದಲ್ಲಿ ಟ್ರ್ಯಾಕ್ಟರಗೆ ನೋಂದಣಿ ನಂಬರ ಇರಲಿಲ್ಲ, ಆದ್ದರಿಂದ ಟ್ರ್ಯಾಕ್ಟರನ ಛೆಸ್ಸಿ ಮತ್ತು ಇಂಜಿನ ನಂಬರ ಬರೆದುಕೊಂಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉ:

ಪ್ರ: 6 ಪ್ರಾಸಾ-02 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ತಾನು ಸದರಿ ಪಂಚನಾಮೆಗೆ 2ನೇ ಪಂಚನಾಮೆ ಸಹಿ ಮಾಡಿರುತ್ತೇನೆಂದು ಹಾಗೂ ಆ ನಂತರ ತಾನು ಹಾಗೂ ಚಾಸಾ-1 ರವರು ಸೇರಿಕೊಂಡು ಸದರಿ ಟ್ರ್ಯಾಕ್ಟರನ್ನು ಪೋಲಿಸರ ಸುಪ್ರದ್ದಿಗೆ ನೀಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉ:

ಪ್ರ: 7 ಪ್ರಾಸಾ-02 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿನಾಂಕಃ 16.01.2020 ರಂದು ಪೋಲಿಸರು ತನ್ನನ್ನು ಠಾಣೆಗೆ ಕರೆಯಿಸಿ ಸದರಿ ಟ್ರ್ಯಾಕ್ಟರಿನ ನೋಂದಣಿ ನಂಬರನ್ನು ತಿಳಿಸಿದ್ದು, ಅದು ಕೆಎ-28-ಟಿಡಿ-2944 ಎಂದು ಇರುತ್ತದೆ. ಆ ನಂತರ ಟ್ರ್ಯಾಕ್ಟರನ ಮಾಲೀಕ ಸದರಿ ನ್ಯಾಯಾಲಯದ ಮುಂದೆ ಇರುವ ಆರೋಪಿ ಎಂದು ಗುರುತ್ತಾಗಿರುವುದಾಗಿ ತಾನು ಪೋಲಿಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉ:

ಪ್ರ: 8 ಪ್ರಾಸಾ-03 ಮೋದಿನ ಸಾಬ ತಂದೆ ಮೆಹಬೂಬಸಾಬ, ಗ್ರಾಮ ಲೆಕ್ಕ ಅಡಳಿತಾಧಿಕಾರಿ, ಇವರು ತಮ್ಮ ಸಾಕ್ಷ್ಯದಲ್ಲಿ ತಹಶೀಲದ್ದಾರ ಅಫಜಲಪೂರ ರವರು 4ನೇ ತಾರೀಖಿನಂದು ಪೋನ್ ಮಾಡಿ ಅನಧಿಕೃತವಾಗಿ ಮರಳು ಸಾಗಾಟ ಮಾಡುತ್ತಿದ್ದಾರೆ ಎಂದು ತಿಳಿಸಿರುತ್ತಾರೆಂದು ಹಾಗೂ ಅದರಂತೆ ತಾವು ಗ್ರಾಮ ಲೆಕ್ಕಾಧಿಕಾರಿ ಮತ್ತು ಗ್ರಾಮ ಸೇವಕ ಶಿವಪೂರು ನಾವೆಲ್ಲಾ ಜಂಟಿಯಾಗಿ ಗಸ್ತು ಕರ್ತವ್ಯದಲ್ಲಿದ್ದಾಗ ಒಂದು ಮರಳು ತುಂಬಿಕೊಂಡ ಟ್ರ್ಯಾಕ್ಟರ ಹೋಗುತ್ತಿದ್ದು, ಸದರಿ ಟ್ರ್ಯಾಕ್ಟರನ್ನು ಕೈ ಮಾಡಿ ನಿಲ್ಲಿಸಿದಾಗ ಸದರಿ ಟ್ರ್ಯಾಕ್ಟರಿನ ಆರೋಪಿ ಚಾಲಕನು ಟ್ರ್ಯಾಕ್ಟರನ್ನು ನಿಲ್ಲಿಸಿ ಓಡಿ ಹೋಗಿರುತ್ತಾನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 9 ಪ್ರಾಸಾ-03 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತದನಂತರ ತಾನು, ಗ್ರಾಮ ಲೆಕ್ಕಾಧಿಕಾರಿ ಮತ್ತು ಗ್ರಾಮ ಸೇವಕ ಎಲ್ಲರೂ ಸೇರಿ ಪಂಚನಾಮೆಯನ್ನು ಬರೆದುಕೊಂಡು ತದನಂತರ ಮಾಶಾಳದ ಹೊರವಲಯ ಪೋಲಿಸ ಠಾಣೆಗೆ ಸದರಿ ಟ್ರ್ಯಾಕ್ಟರನ್ನು ಪೋಲಿಸರ ವಶಕ್ಕೆ ನೀಡಿ ದಿನಾಂಕಃ 05.12.2019 ರಂದು ಪೋಲಿಸ ಠಾಣೆಗೆ ಹೋಗಿ ನಿಶಾನೆ ಪಿ-6 ರಂತೆ ದೂರು ನೀಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 10 ಪ್ರಾಸಾ-03 ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 16.01.2020 ರಂದು ಟ್ರ್ಯಾಕ್ಟರಿನ ಮಾಲಕನು ನ್ಯಾಯಾಲಯದ ಆದೇಶ ಪಡೆದು ಒಬ್ಬ ಜಾಮೀನುದಾರನೊಂದಿಗೆ ಟ್ರ್ಯಾಕ್ಟರ ಬಿಡಿಸಲು ಬಂದಾಗ ಸದರಿ ಟ್ರ್ಯಾಕ್ಟರಿನ ಮಾಲಕನನ್ನು ನೋಡಿ ಗುರುತಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 11 ಪ್ರಾಸಾ-4 ವಿಜಯಕುಮಾರ ತಂದೆ ಬಸವಣ್ಣಪ್ಪ ನಿವೃತ್ತ ಎ.ಇ.ಇ. ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 17.12.2019 ರಂದು ಅಫಜಲಪೂರ ಪೋಲಿಸ ಠಾಣೆಯಿಂದ ಒಂದು ಕೋರಿಕೆ ಪತ್ರ ಬಂದಿದ್ದು ಸದರಿ ಕೋರಿಕೆ ಪತ್ರದಲ್ಲಿ ಜಪ್ತಿಪಡಿಸಿಕೊಂಡ ಮರಳಿನ ಅಳತೆ ಮಾಡಿಕೊಡಲು ಕೇಳಿಕೊಂಡಿದ್ದು ಸದರಿಯವರ ಕೋರಿಕೆಯಂತೆ ಜಪ್ತಿಪಡಿಸಿಕೊಂಡ ಮರಳಿನ ಅಳತೆ ಕಾರ್ಯ ಮಾಡಿರುತ್ತೇನೆಂದು ಹಾಗೂ 1 ಕ್ಯೂಬಿಕ ಮೀಟರ ಇರುತ್ತದೆ ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ-12 ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ

ಪ್ರ-13 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಚಿಸುವಿರಾ?

ಉಃ

(ಆರೋಪಿತನ/ರ ಹೇಳಿಕೆಯನ್ನು ಆರೋಪಿತರಿಗೆ/ನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ/ನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿನಾಂಕಃ 20.12.2025

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಅಫಜಲಪೂರ.